# ಗಾಂಧಿನಗರ ಪೋಸ್ಟ್

## ಗೊಂಬೆ ಗೊಂಬೆ ಗೊಂಬೆ...



'ನಟನಾಗಬೇಕು ಎಂದು ಮಗ ಕನಸು ಕಾಣುವುದನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ, ತಾನು ದುರ್ಯೋಧನನ ಪಾತ್ರದಲ್ಲಿ ನಟಿಸಿರುವ ವಿಡಿಯೋವನ್ನು ಅವನು ತೋರಿಸಿದಾಗ, ಮಗನ ನಟನೆಯನ್ನು ನೋಡಿ ಸಂತೋಷದಿಂದ ಕಣ್ಣೀರು ಬಂತು. ಅವನ ಪ್ರತಿಭೆಯನ್ನು ಬೆಂಬಲಿಸಲಿಕ್ಕಾಗಿ ಸಿನಿಮಾ ಮಾಡಿದೆ'. ನಿರ್ಮಾಪಕ ಕೃಷ್ಣಪ್ಪ ಕನಕಪುರ ತಮ್ಮ 'ಚಿನ್ನದಗೊಂಬೆ' ಕುರಿತು ಹೇಳಿಕೊಳ್ಳುವುದು ಹೀಗೆ. ಅವರ ನಿಜವಾದ ಚಿನ್ನದಗೊಂಬೆಯ ಹೆಸರು – ಕೀರ್ತಿ ಕೃಷ್ಣ.

ಕೀರ್ತಿ ಅವಕಾಶಕ್ಕಾಗಿ ಸಾಕಷ್ಟು ಅಲೆದಾಡಿದ್ದಾರಂತೆ. ಎಲ್ಲರೂ ಕೈಬಿಟ್ಟಾಗ ಹೆತ್ತವರು ಕೈಹಿಡಿದಿದ್ದಾರೆ. ಈ ಮೂಲಕ ಅವಕಾಶಕ್ಕಾಗಿ ಸೈಕಲ್ ಹೊಡೆಯುವುದು ಕೊನೆಗೊಂಡಿದೆ. ಮಾರ್ಚ್ 2ರಂದು ತೆರೆಕಾಣುತ್ತಿರುವ ಸಿನಿಮಾದ ಬಗ್ಗೆ ನಕುಲ್‌ಗೆ ಸಾಕಷ್ಟು ನಿರೀಕ್ಷೆಗಳಿವೆ.

ಪಂಕಜ್ ಬಾಲನ್ ಚಿತ್ರದ ನಿರ್ದೇಶಕ. ತೆಲುಗಿನ ಪಂಕಜ್, ಈಗಾಗಲೇ ತಮಿಳು–ತೆಲುಗಿನಲ್ಲಿ ತಲಾ ಒಂದು ಸಿನಿಮಾ ನಿರ್ದೇಶಿಸಿದ್ದಾರೆ. ಹ್ಯೂಮರ್ ಮತ್ತು ಹಾರರ್ ಎರಡರ ಹದವಾದ ಸಮೀಕರಣ ಎನ್ನುವುದು ತಮ್ಮ ಚಿತ್ರದ ಬಗ್ಗೆ ಅವರ ಬಣ್ಣನೆ. ಚಿತ್ರವೊಂದರ ಶೂಟಿಂಗ್ ಸಂದರ್ಭದಲ್ಲಿ ಕೊಲೆಯಾಗುವ ನಾಯಕಿಯ ಸಾವಿನ ರಹಸ್ಯವನ್ನು ಭೇದಿಸುವ ಕಥೆ ಚಿತ್ರದಲ್ಲಿದೆಯಂತೆ.

ಲೀನಾ ಖುಷಿ ಚಿತ್ರದ ನಾಯಕಿ. 'ಚಿನ್ನದ ಗೊಂಬೆ' ಅವರ ಮೊದಲ ಸಿನಿಮಾ. ಎರಡನೇ ನಾಯಕಿಯಾಗಿ ನಟಿಸಿರುವ ಅಂಜುಶ್ರೀ ಈಗಾಗಲೇ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿರುವ ಅನುಭವಿ. 'ತಿಥಿ' ಚಿತ್ರದ ಖ್ಯಾತಿಯ ಸೆಂಚುರಿಗೌಡ ಹಾಗೂ ಗಡ್ಡಪ್ಪ ಕೂಡ ತಾರಾಗಣದಲ್ಲಿದ್ದಾರೆ. ವೆಂಕಿ ದರ್ಶನ್ ಛಾಯಾಗ್ರಹಣ ಹಾಗೂ ಡಿ. ಶೀಲನ್ ಸಂಗೀತ ಚಿತ್ರಕ್ಕಿದೆ.

## ಲವ್ ಸ್ಟೋರಿ ಮತ್ತು ರಾಯಭಾರಿ



ಇದು ರಿಯಲ್ ಲವ್ ಸ್ಟೋರಿ! 'ಪ್ರೀತಿಯ ರಾಯಭಾರಿ' ಚಿತ್ರದ ಬಗ್ಗೆ ನಿರ್ದೇಶಕ ಎಂ.ಎಂ. ಮುತ್ತು ಅವರ ಒಂದು ಸಾಲಿನ ಹೇಳಿಕೆಯಿದು. ಚಿತ್ರಮಂದಿರಗಳ ಹೊಸ್ತಿಲಲ್ಲಿರುವ (ಮಾರ್ಚ್ 2ರಂದು ತೆರೆಗೆ) 'ಪ್ರೀತಿಯ ರಾಯಭಾರಿ' ಮುತ್ತು ಅವರ ಪಾಲಿಗೆ ಚೊಚ್ಚಲ ಅನುಭವ. ನೈಜ ಘಟನೆಯೊಂದನ್ನು ಸಿನಿಮಾಕ್ಕೆ ಅಳವಡಿಸಿರುವ ಅವರು, ನಿರ್ದೇಶನದೊಂದಿಗೆ ಚಿತ್ರಕಥೆ, ಸಂಭಾಷಣೆಯನ್ನೂ ಬರೆದಿದ್ದಾರೆ.

ಕೃಷಿವಿಜ್ಞಾನದ ಪದವಿ ಪಡೆದು ಕನಸುಗಳೊಂದಿಗೆ ಹಳ್ಳಿಗೆ ಮರಳುವ ತರುಣನೊಬ್ಬನ ಬದುಕಿನ ಕಥೆ ಚಿತ್ರದಲ್ಲಿದೆ. ಊರಿನ ಅಭಿವೃದ್ಧಿಯ ಕನಸು ಕಂಡ ನಾಯಕ ಪ್ರೀತಿಯ ಸೆಳೆತಕ್ಕೆ ಸಿಲುಕುವುದು ಕಥೆಯಲ್ಲಿನ ತಿರುವು. ವಾಹಿನಿಗಳಲ್ಲಿ ಪ್ರಸಾರವಾಗುವ ಅಪರಾಧ ಕಾರ್ಯಕ್ರಮಗಳ ಕುರಿತ ನಿರ್ದೇಶಕರ ಆಸಕ್ತಿಯೂ ಚಿತ್ರಕಥೆ ರೂಪುಗೊಳ್ಳಲು ಕಾರಣವಾಗಿದೆಯಂತೆ. ಉಳಿದಂತೆ, ಎಲ್ಲ ಪ್ರೇಮಕಥೆಗಳಲ್ಲಿ ಇರುವ ಪ್ರೇಮಕ್ಕೆ ಎದುರಾಗುವ ಸವಾಲು ಹಾಗೂ ಜವಾಬುಗಳು ಮುತ್ತು ಅವರ ಚಿತ್ರದಲ್ಲಿಯೂ ಇವೆ.

ಪ್ರೀತಿಯ ರಾಯಭಾರಿಯಾಗಿ ನಕುಲ್ ನಟಿಸಿದ್ದಾರೆ. ನಾಯಕ ನಟನಾಗಿ ಅವರಿಗಿದು ಚೊಚ್ಚಲ ಸಿನಿಮಾ. ರಂಗಭೂಮಿಯ ಪಳಗಿದ ತರಬೇತುದಾರರಿಂದ ನಕುಲ್ ಪಾಠ ಹೇಳಿಸಿಕೊಂಡಿದ್ದಾರೆ. ನಾಯಕಿ ಅಂಜನಾ ದೇಶಪಾಂಡೆ ಅವರಿಗಿದು ಎರಡನೇ ಸಿನಿಮಾ. ಈ ಮುನ್ನ 'ತರ್ಲೆ ನನ್ಮಕ್ಳು' ಚಿತ್ರದಲ್ಲಿ ಅಂಜನಾ ನಾಯಕಿಯಾಗಿ ಕಾಣಿಸಿಕೊಂಡಿದ್ದರು. ಉತ್ಸಾಹಿ ತಂಡದೊಂದಿಗೆ ಕೆಲಸ ಮಾಡಿದ ಅನುಭವ ಅವರಿಗೆ ಖುಷಿ ಕೊಟ್ಟಿದೆ. ಸಾಧು ಕೋಕಿಲ, ಸುಚೇಂದ್ರಪ್ರಸಾದ್, ಚರಣ್ರಾವಜ್, ಪದ್ಮಜಾರಾವ್ ಹಾಗೂ ಮದನ್ ತಾರಾಗಣದಲ್ಲಿರುವ ಪ್ರಮುಖರು. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ.

■ ರಘು